ಶ್ರೀ ರಾಮಕೃಷ್ಣ ಹೆಗಡೆ.—ಸ್ಟೇಟ್‌ಮೆಂಟಿನಲ್ಲಿ ಬಹಳ ವಿವರವಾಗಿ, ಸ್ಪಷ್ಟವಾಗಿ ತೋರಿಸಿದೆ. ಗವರ್ನಮೆಂಟ್ ಆಫ್ ಇಂಡಿಯಾದಿಂದ ತೆಗೆದುಕೊಂಡ ಸಾಲ ಎಷ್ಟು, ಪಬ್ಲಿಕ್ ಲೋನ್ಸ್ ಎಷ್ಟು, ಬ್ಯಾಂಕ್ ಲೋನ್ಸ್ ಎಷ್ಟು, ಬೇರೆ ಬೇರೆ ಫೈನಾನ್ಸಿಂಗ್ ಏಜೆನ್ಸಿಯಿಂದ ರಿಜರ್ವ್ ಬ್ಯಾಂಕಿನಿಂದ ತೆಗೆದುಕೊಂಡ ಸಾಲ ಎಷ್ಟು ಇದನ್ನು ಸ್ಪಷ್ಟವಾಗಿ ಕೊಟ್ಟಿದ್ದೇವೆ. ಓದಿದರೆ ಗೊತ್ತಾಗುತ್ತದೆ. ಅವರಿಗೆ ಓದಲು ಸಾಧ್ಯವಿಲ್ಲದಿದ್ದರೆ ನಾನು ಓದಿ ತೋರಿಸುತ್ತೇನೆ.

ಶ್ರೀ ಬಿ. ಪಿ. ಗಂಗಾಧರ.—ಇಷ್ಟು ಹೆಚ್ಚು ಸಾಲ ಮಾಡುವುದಕ್ಕೆ ಸರಕಾರ ದುಂದು ವೆಚ್ಚ ಮಾಡುವುದೇ ಕಾರಣ. ನಮ್ಮ ಇಂಡಸ್ಟ್ರಿಸ್‌ನಿಂದ ವರ್ಷೇ ವರ್ಷೇ ಲಾಭ ಬಾರದೆ ನಷ್ಟ ಜಾಸ್ತಿಯಾಗಿರುತ್ತದೆ. ಲಾಭ ಬರುವುದರ ಕಡೆ ಗಮನ ಕೊಟ್ಟಿದ್ದರೆ ಇಷ್ಟು ಆಗುತ್ತಿರಲಿಲ್ಲ ಅಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಇದು ಮಾನ್ಯ ಸದಸ್ಯರ ಕಲ್ಪನೆ. ದುಂದು ವೆಚ್ಚ ಆಗಿದೆ ಎಂದು ಹೇಳಿದ ಮಾತ್ರಕ್ಕೆ ಅದು ಆಗುವುದಿಲ್ಲ. ಈ ನಭೆಗೆ ಗೊತ್ತಿಲ್ಲದೆ ಸರಕಾರ ವೆಚ್ಚ ಮಾಡುವುದಕ್ಕೆ ಸಾಧ್ಯವಿಲ್ಲ. ಇದನ್ನು ಅವರು ತಿಳಿದುಕೊಳ್ಳಬೇಕು.

ಶ್ರೀ ಎಸ್. ಎಂ. ಗುರೆಡ್ಡಿ.—ಓವರ್ ಡ್ರಾಫ್ಟ್ ಕಡಿಮೆಯಾಗಿದೆ ಎನ್ನುವ ಮಾತು ಸ್ಪಷ್ಟವಾಗಿದೆ ರಾಜ್ಯ ಸರಕಾರಕ್ಕೆ ರ್ಯಾಂಡ್ ರೆವೆನ್ಯೂ ಮುಂಖಾಂತರ ಸೇಲ್ಸ್‌ಟ್ಯಾಕ್ಸ್ ಮುಖಾಂತರ ಬರಬೇಕಾದಂಥ ಬಾಕಿ ಹಣವನ್ನು ಇದರಲ್ಲಿ ಕಳೆದರೆ ಓವರ್ ಡ್ರಾಫ್ಟ್ ಕ್ಲಿಯರ್ ಆಗುತ್ತದೆ ಎಂಬುದು ಗಮನದಲ್ಲಿ ಇದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಅದು ನಿಜ. ಈ ವರ್ಷ ಪ್ರಾರಂಭದಲ್ಲಿ 12 ಕೋಟಿ ಓವರ್ ಡ್ರಾಫ್ಟ್ ಇದ್ದಿತು. ಮೂರು ವರ್ಷಗಳ ಹಿಂದೆ 30 ಕೋಟಿಗೆ ಹೆಚ್ಚು ಇತ್ತು. ಕೇವಲ ಕಂದಾಯ ಬಾಕಿ ರಾಜ್ಯದಲ್ಲಿರುವುದು ಹತ್ತು ಕೋಟಿಗಿಂತ ಹೆಚ್ಚಿಗೆ ಇದೆ. ಅದು ಸಂಪೂರ್ಣವಾಗಿ ವಸೂಲಾದರೆ, ನಮಗೆ ಬರತಕ್ಕಂಥ ಹಣ ಅಂದರೆ ಮುನಿಸಿಪಾಲ್ಟಿಗಳಿಂದ ಸ್ಥಾನಿಕ ಸಂಸ್ಥೆಗಳಿಂದ ಸಾಲ ತೆಗೆದುಕೊಂಡದ್ದು ಬಂದರೆ ಈ ಓವರ್ ಡ್ರಾಫ್ಟ್ ಕ್ಲಿಯರ್ ಆಗಿ ಹೋಗುವುದಲ್ಲದೆ ಹೆಚ್ಚು ದುಡ್ಡು ನಮಗೆ ಉಳಿಯುತ್ತದೆ. 17 ಕೋಟಿ ಮುನಿಸಿಪಲ್ ಸಂಸ್ಥೆಗಳಿಂದ ಬರಬೇಕಾದ ಬಾಕಿ ಇದೆ. ಇಲ್ಲಿ ಒಂದು ಮಾತನ್ನು ಹೇಳಬೇಕಾದುದು ಅಂದರೆ, ಮಾನ್ಯ ಸದಸ್ಯರು ನಮಗೆ ಸಹಕಾರ ಮಾಡಬೇಕು. ಇದಕ್ಕೆ ಸ್ಟೇ ಆರ್ಡರ್ ಕೊಡಿ, ಅದಕ್ಕೆ ತಡೆ ಆಜ್ಞೆ ಕೊಡಿ ಎಂದು ಅವರು ನಾನಾ ರೀತಿಯಿಂದ ಹೇಳುವುದರಿಂದ ಬಹಳ ತೊಂದರೆಯಾಗುತ್ತದೆ.

JUNIOR ENGINEERS OF THE MYSORE PUBLIC WORKS DEPARTMENT

116. **Sri T. R. SHAMANNA (Fort).—**

Will the Minister for Public Works be pleased to state :—

(*a*) whether the Junior Engineers of the Mysore Public Works Department resigned their jobs for want of better pay scales and service conditions and later on returned to duty last year ;

(*b*) whether the Minister for Public Works gave any assurance in this regard and if so, the action taken by the Government to implement the above assurance ;

(*c*) the number of Engineering Graduates with over 10 years service that are still in the non-gazetted cadre ;

(*d*) whether they would take action to issue orders promoting these to Gazetted Cadre as has been done in the case of Medical Diploma Holders and Agricultural Graduates ;

(*e*) whether any arrangement has been made to assist the Pay Commission in respect of the intricate problems pertaining to technical personnel ?

A.—Sri VEERENDRA PATIL (Minister for Public Works).—

(*a*) Yes.

(*b*) After considering several requests of Junior Engineers Association, orders were issued by Government revising the pay scales of Junior Engineers to Rs. 250–15–400 from 1st April 1966 with 2 advance increments for such of the Junior Engineers who possess post-graduate qualifications.

(*c*) 173.

(*d*) They will be promoted in their turn according to Cadre and Recruitment Rules.

(*e*) Yes.

ಶ್ರೀ ಟಿ. ಆರ್. ಶಾಮಣ್ಣ.—ವೈದ್ಯ ಮತ್ತು ವ್ಯವಸಾಯ ಪದವೀಧರರಿಗೆ ಕೊಡುತ್ತಿರುವ ಸೌಲಭ್ಯ ಜೂನಿಯರ್ ಇಂಜಿನಿಯರುಗಳಿಗೆ ಕೊಡುವುದಕ್ಕೆ ಏನು ತೊಂದರೆ ಇದೆ ?

† ಶ್ರೀ ವೀರೇಂದ್ರ ಪಾಟೀರ್.—ಪ್ರೇ ಕಮಿಷನ್ನಿಗೆ ಈ ಪ್ರಶ್ನೆಯನ್ನು ಬಿಟ್ಟಿದ್ದೇವೆ. ಅದು ಈಗ ಅವರ ಮುಂದೆ ಇದೆ. ಅವರ ರಿಪೋರ್ಟ್ ಹೇಗೆ ಬರುತ್ತದೆ ಎಂದು ನೋಡಿಕೊಂಡು ಮುಂದಿನ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಟಿ. ಆರ್. ಶಾಮಣ್ಣ.—ಇಂಜಿನಿಯರಿಂಗ್ ನೌಕರರಿಗೆ ನ್ಯಾಯವಾಗಿ ಏನು ಕೊಡ ಬೇಕೋ ಅದನ್ನು ಕೊಡದೆ ಅತ್ಯಪ್ತಿಯುಂಟಾದರೆ ಕುರಿ ಕಾಯುತ್ತೀಯಾ ತೋಳ ಎಂದರೆ ಸಂಬಳ ವಿಲ್ಲದೆ ಕಾಯುತ್ತೇನೆ ಎನ್ನುವಂಥ ಪರಿಸ್ಥಿತಿಯುಂಟಾಗುವುದಿಲ್ಲವೇ ?

ಶ್ರೀ ವೀರೇಂದ್ರ ಪಾಟೀರ್.—ಮಾನ್ಯ ಸದಸ್ಯರ ಅಭಿಪ್ರಾಯದಲ್ಲಿ ಏನು ನ್ಯಾಯ ಸಿಕ್ಕಬೇಕು ಎಂದು ನನಗೆ ಗೊತ್ತಿಲ್ಲ. ಆದರೆ ಪೊದಲು ಇವರಿಗೆ ಬಹಳ ಕಡಮೆ ವೇತನ ಸಿಕ್ಕುತ್ತಿತ್ತು. ಅವರ ಪೇ ಸ್ಕೇರ್ ಎರಡು ಸಲ ರಿವೈಸ್ ಮಾಡಿದೆ. 200–10–300–15–375ಕ್ಕೆ ಮೊದಲು ರಿವೈಸ್ ಮಾಡಿ ಆ ನಂತರ 250–15–400ಕ್ಕೆ ರಿವೈಸ್ ಮಾಡಲಾಗಿದೆ. ಇಷ್ಟೇ ಅಲ್ಲದೆ ಪೋಸ್ಟ್ ಗ್ರಾಜು ವೇಟ್ ಆದವರಿಗೆ ಎರಡು ಅಡ್ವಾನ್ಸ್ ಇನ್‌ಕ್ರಿಮೆಂಟ್‌ಗಳನ್ನು ಕೊಡಬೇಕೆಂದು ಮಾಡಿದೆ. ಇದಾದ ಮೇಲೆ ಕೆಲವು ಜನರಿಗೆ ರಿವೈಸ್ಡ್ ಪೇ ಸ್ಕೇಲಿನಿಂದ ಅನುಕೂಲವಾಗಲಿಲ್ಲ ಎಂದು ಹೇಳಿದ್ದರ ಸಲು ವಾಗಿ 25–11–67ಕ್ಕೆ ಒಂದು ಆರ್ಡರ್ ಹೊರಡಿಸಿ ರಿವೈಸ್ಡ್ ಪೇ ಸ್ಕೇಲಿನಲ್ಲಿ ನೆಕ್ಸ್ಟ್ ಸ್ಟೇಜಿಗೆ ಫಿಕ್ಸ್ ಮಾಡಬೇಕೆಂದು ಮಾಡಿದ್ದೇವೆ. ಅವರಿಗೆ ಅನುಕೂಲ ಮಾಡಿಕೊಡುವುದಕ್ಕೆ ಎಷ್ಟು ಸಾಧ್ಯ ವಿದೆ ಅಷ್ಟನ್ನೂ ಮಾಡಿದ್ದೇವೆ.

Waters of Thungabhadra River to Irrigate Lands of Koppal

117. Sri VIRUPAKSHA GOWDA (Koppal).—

Will the Minister for Public Works be pleased to state :—

(*a*) whether Government have thought of any scheme to bring the Waters of Thungabhadra river to irrigate the vast area of cultivable lands of Koppal Taluk especially those bordering Mundargi Taluk ;

(*b*) if not, whether Government would consider such a scheme and provide irrigation facilities during this plan period in view of the usual shortage of rainfall in that area ?